ಬಸವಕಲ್ಯಾಣ ಮತಕ್ಷೇತ್ರದಲ್ಲಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವುದು

186(1649) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವಕಲ್ಯಾಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉಜಲಂಬ, ಬೋಸಗಾ, ಹಿರೇನಾಗಾಂವ್ ಗ್ರಾಮಗಳಲ್ಲಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವ ಸಲುವಾಗಿ ಕಟ್ಟಡಗಳನ್ನು ನಿರ್ಮಿಸಿ 3-4 ವರ್ಷಗಳಾಗಿದ್ದರೂ ಈ ಗ್ರಾಮಗಳಲ್ಲಿ ಪಶುವೈದ್ಯ ಚಿಕಿತ್ಸಾಲಯಗಳನ್ನು ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಆ) ಈ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳು ಇಲ್ಲದಿರುವುದರಿಂದ ಜಾನುವಾರುಗಳಿಗೆ ತೊಂದರೆಯಾಗಿದ್ದು, ಈಗಾಗಲೇ ಕಟ್ಟಡ ನಿರ್ಮಾಣ ಪೂರ್ಣಗೊಂಡಿರುವುದರಿಂದ ಮೇಲ್ಕಂಡ ಗ್ರಾಮಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹಿರೇನಾಗಾಂವ್ ಗ್ರಾಮದ ಕಟ್ಟಡದಲ್ಲಿ ಪಶುವೈದ್ಯ ಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದೆ. ಬೋಸಗಾ ಹಾಗೂ ಉಜಲಾಂಭ ಗ್ರಾಮಗಳಿಗೆ ಕಟ್ಟಡಗಳನ್ನು ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆ. ಪಶು ಚಿಕಿತ್ಸಾಲಯ ಮಂಜೂರಾತಿಯಾಗದ ಕಾರಣ ಹೊಸ ಕಟ್ಟಡಗಳನ್ನು ಉಪಯೋಗಿಸಿಕೊಂಡಿರುವುದಿಲ್ಲ.

ಆ) ಹಿರೇನಾಗಾಂವ್ ಗ್ರಾಮದಲ್ಲಿರುವ ಪಶು ಚಿಕಿತ್ಸಾಲಯವು ಮುಂಚೆಯೇ ಮಂಜೂರಾಗಿದ್ದು, ಹೊಸ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬೋಸಗಾ ಮತ್ತು ಉಜಲಾಂಭಗಳಿಗೆ ಹೋಸ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡದೇ ಇರುವುದರಿಂದ ಹೊಸ ಕಟ್ಟಡಗಳನ್ನು ಉಪಯೋಗಿಸಿಕೊಂಡಿರುವುದಿಲ್ಲ. ಸದರಿ ಕಟ್ಟಡಗಳನ್ನು ಉಪಯೋಗಿಸಿಕೊಳ್ಳುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು.

ಶ್ರೀ ಎಂ.ಜಿ. ಮುಳೆ:- ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣ ಗಡಿಪ್ರದೇಶದಲ್ಲಿರುವುದರಿಂದ ಅಲ್ಲಿ ಪಶು ಚಿಕಿತ್ಸಾ ಆಸ್ಪತ್ರೆ ಇಲ್ಲದಿರುವುದನ್ನು ನೋಡಿ ತೊಂದರೆಯಾಗುತ್ತಿದೆಯೆಂದು ಅಲ್ಲಿ ಪಶು ವೈದ್ಯ ಚಿಕಿತ್ಸಾಲಯ ಕಟ್ಟಡವನ್ನು ರೆಡಿಮಾಡಿ ಮುರ್ನಾಲ್ಕು ವರ್ಷಗಳಾಯಿತು. ಇನ್ನೂ ಆಸ್ಪತ್ರೆ ಓಪನ್ ಆಗಿಲ್ಲ. ಅಲ್ಲಿನ ನೆಸೆಸಿಟಿಯನ್ನು ನೋಡಿ, ಉಜಲಂಬ ಮತ್ತು ಬೋಸಗಾದಲ್ಲಿ ಪಶುವೈದ್ಯ ಚಿಕಿತ್ಸಾಲಯವನ್ನು ಶುರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಮಹದೇವ್:- ಮಾನ್ಯ ಅಧ್ಯಕ್ಷರೆ, ಬಸವಕಲ್ಯಾಣ ಕ್ಷೇತ್ರದ ಹಿರೇನಾಗಾಂವ್‌ನಲ್ಲಿ ಮತ್ತು ಉಜಲಂಬ ಗ್ರಾಮಗಳಲ್ಲಿ ಗಡಿಪ್ರದೇಶಾಭಿವೃದ್ಧಿ ಯೋಜನೆಯ ಕೆಳಗೆ ಎರಡು ಪಶುವೈದ್ಯ ಚಿಕಿತ್ಸಾಲಯವನ್ನು ನಿರ್ಮಿಸಿರುವುದು ಸರ್ಕಾರಕ್ಕೆ ಗೊತ್ತಿದೆ. ಈ ಕಟ್ಟಡಗಳನ್ನು ನಿರ್ಮಿಸಲು ಪಶುಸಂಗೋಪನಾ ಇಲಾಖೆಯು ಬೇಡಿಕೆಗಳನ್ನು ಸಲ್ಲಿಸಿರುವುದಿಲ್ಲ. ಬೇಡಿಕೆ ಸಲ್ಲಿಸದಿದ್ದರೂ ಕಟ್ಟಡಗಳನ್ನು ಕಟ್ಟಲಾಗಿದೆ. ಕಟ್ಟಡಗಳನ್ನು ಕಟ್ಟಿಸಿರುವ ಮೂರು ಗ್ರಾಮಗಳ ಪೈಕಿ ಹಿರೇನಾಗಾಂವ್ ಗ್ರಾಮದಲ್ಲಿ ಮಾತ್ರ 1993ರಲ್ಲಿ ಮಂಜೂರಾದ ಪಶು ಚಿಕಿತ್ಸಾಲಯ ಇದ್ದುದ್ದರಿಂದ 1995ನೇ ಇಸವಿಯಲ್ಲಿ ಕಟ್ಟಡವನ್ನು ಇಲಾಖೆ ವಶಕ್ಕೆ ಪಡೆದು ಸದರಿ ಕಟ್ಟಡದಲ್ಲಿ ಪಶು ಚಿಕಿತ್ಸಾಲಯವನ್ನು ನಡೆಸಲಾಗುತ್ತಿದೆ. ಬೋಸಗಾ ಹಾಗೂ ಉಜಲಂಬ ಗ್ರಾಮಗಳಿಗೆ

ಪಶು ಚಿಕಿತ್ಸಾಲಯ ಮಂಜೂರಾಗದೆ ಇರುವುದರಿಂದ ಆ ಕಟ್ಟಡವನ್ನು ಉಪಯೋಗಿಸಿಕೊಂಡಿರುವುದಿಲ್ಲ. ಹಾಗೆ ಉಪಯೋಗಿಸಿಕೊಳ್ಳದಿರುವ ಸದರಿ ಎರಡು ಕಟ್ಟಡಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ.ಜಿ. ಮುಳೆ:- ಮಾನ್ಯ ಅಧ್ಯಕ್ಷರೆ, ಈಗ ಇದ್ದಂತಹ ಪಶು ಚಿಕಿತ್ಸಾಲಯ ಮತ್ತು ಉಜಲಂಬ ಹಾಗೂ ಬೋಸಗಾ ಇವುಗಳ ಅಂತರ 30ರಿಂದ 40ಕಿಲೋಮೀಟರ್ ದೂರವಿದೆ. ಆದ್ದರಿಂದಲ್ಲಿ ಬಹಳ ತೊಂದರೆಯಾಗುತ್ತಿದೆ. ತಾವು ಆ ಎರಡು ಕಟ್ಟಡಗಳಲ್ಲಿ ಆದಷ್ಟು ಶೀಘ್ರವಾಗಿ ಪಶುವೈದ್ಯ ಚಿಕಿತ್ಸಾಲಯ ತೆರೆಯಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಂ.ಮಹದೇವ್:- ಸರ್ಕಾರ ಆಸ್ಪತ್ರೆಗಳನ್ನು ಮಂಜೂರು ಮಾಡತಕ್ಕ ಸಂದರ್ಭದಲ್ಲಿ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆ ಕೈಗಾರಿಕಾ ಪ್ರದೇಶವೆಂದು ಆಯ್ಕೆ ಮಾಡಿದ ಸ್ಥಳಗಳು

187(1507) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕರ್ನಾಟಕ ಭಾಗದಲ್ಲಿ ರೇಷ್ಮೆ ಕೈಗಾರಿಕಾ ಪ್ರದೇಶವೆಂದು ಆಯ್ಕೆ ಮಾಡಿದ ಸ್ಥಳಗಳಾವುವು?

ಆ) ಉತ್ತರ ಕರ್ನಾಟಕದ ಪ್ರಗತಿಗಾಗಿ ಸರ್ಕಾರ ಕೈಗೊಂಡ ರೂಪರೇಷೆಗಳಾವುವು?

ಇ) ಈವರೆಗೂ ಆಯ್ಕೆ ಮಾಡಿದ ಸ್ಥಳಗಳಾವುವು? ಇದಕ್ಕಾಗಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರೇಷ್ಮೆ ಕೃಷಿಯಲ್ಲಿ ಕೈಗಾರಿಕೆ ಎಂದು ಪರಿಗಣಿಸಿರುವ ಅಭಿವೃದ್ಧಿ ಕೇಂದ್ರಗಳನ್ನು ಉತ್ತರ ಕರ್ನಾಟಕದ ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ.

ಕ್ರ.ಸಂ.	ಜಿಲ್ಲೆ	ಸ್ಥಳ
1.	ಗುಲ್ಬರ್ಗ	ಜೀವರ್ಗಿ
2.	ಬಿಜಾಪುರ	ನವರಸಪುರ
3.	ಬೆಳಗಾಂ	ತಿಗಡಿ
4.	ಬಳ್ಳಾರಿ	ಕೂಡ್ಲಿಗಿ

ಆ) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೇಷ್ಮೆ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ರೈತರಿಗೆ ರೇಷ್ಮೆ ವ್ಯವಸಾಯ ಪ್ರಾರಂಭಿಸಲು ಹಿಪ್ಪುನೇರಳೆ ನಾಟಿ ಹುಳು ಸಾಕಣೆ:ಸಲಕರಣೆಗಳ ಖರೀದಿ ಮತ್ತು ಹುಳು ಸಾಕಣೆ ಮನೆ ನಿರ್ಮಾಣಕ್ಕೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

2. ಸುಧಾರಿತ ಹಿಪ್ಪು ನೇರಳೆ ತಳಿಗಳ ಸಸಿಗಳನ್ನು ಬೆಳೆಸಿ, ವಿತರಿಸಲಾಗುತ್ತಿದೆ.

3. ರೈತರಿಗೆ ತಾಂತ್ರಿಕ ಸಲಹೆ ನೀಡಲು ತಾಂತ್ರಿಕ ಸೇವಾ ಕೇಂದ್ರಗಳು: ಗೂಡು ಮಾರಾಟಕ್ಕೆ ಗೂಡಿನ ಮಾರುಕಟ್ಟೆಗಳು ಮತ್ತು ರೋಗರಹಿತ ರೇಷ್ಮೆ ಪಡೆಯಲು ಬಿತ್ತನೆ ಕೋಠಿಗಳನ್ನು ಸ್ಥಾಪಿಸಲಾಗಿದೆ.